ಮೈಸೂರು ಡಿಸ್ಟ್ರಿಕ್ಟು.

ನಂ. 3. ತಾರೀಖು 18ನೇ ಮೇ 1887.

ಹುಣಸೂರು ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ದಸ್ತಾವೇಜನ್ನು ಕ್ರಮವಾದ ವಾರಸ್ದಾರ್ರಾಗಲೀ ಅಥವಾ ಅಧಿಕಾರ ಹೊಂದಿದ ಮುಕ್ತಾರೀಕನಾಗಲಿ ಈ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು, ತಪ್ಪಿದಲ್ಲಿ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ನಾಶ ಮಾಡಲ್ಪಡುತ್ತೆ.

ನಂಬರ್.	ದಸ್ತಾವೇಜನ್ನು ಬರದು ಕೊಟ್ಟವನ ಹೆಸರು ಮತ್ತು ಅಡಿಷನ್.	ದಸ್ತಾವೇಜನ್ನು ತೆಗೆದುಕೊಂಡವರ ಹೆಸರು ಮತ್ತು ಅಡಿಷನ್.	ರಿಜಿಸ್ಟ್ರಿಗೆ ಬಂದಿರುವ ತಾರೀಖು.	ರಿಜಿಸ್ಟರಾದ ತಾರೀಖು.	ದಸ್ತಾವೇಜಿನ ಕಿಮ್ಮತ್ತು ಮತ್ತು ಸ್ವಭಾವ.
351 ———— 1884—85	ಹುಣಸೂರು ಕಸಬೇಲಿರುವ ಮುಸಲಮಾನ್ ಜಾತಿ ಮೂಕೆ ಖಾಶಿಂಸಾಹೆಬರವರಿಗೆ ಅಮೃತಮಹಲ್ ಇಲಾಖಾ ದರೋಗ ಮಹಮ್ಮದ್ ಗೌಸ್ 1, ಮಹಮ್ಮದ್ ಜಮಾಲುದ್ದಿ 1, ಆಷಾಬಿ 1	ಹುಣಸೂರು ಕಸಬೇಲಿರುವ ಮುಸಲಮಾನರ ಜಾತಿ ಮಹಮ್ಮದ್ ಮುನೀನಾಷರೀಫ್ ಸಾಹೇಬರ ಹೆಂಡತಿನೂರಬಿ 1—2ನೇ ಹೆಂಡತಿ ಹುರಾಬಿ 1 ದತ್ತು ಮಗ ಮುಹಮ್ಮದ್ ಮುನೀರ್ ಷರೀಫ್ ಸಾಹೆಬ 1	18—2—85	20—2—85	ಕಿಮ್ಮತ್ತು ಯಿಲ್ಲದ ಸ್ಥಿರಸ್ವತ್ತಿಗೆ ಸಂಬಂಧಪಡುವ ಖುಲಾಸೆ ಪತ್ರ.

ಟಿ. ಆನಂದರಾವ್,
ರಿಜಿಸ್ಟ್ರಾರ್.

ತಾರೀಖು 25ನೇ ಮೇ 1887.

ಮೈಸೂರು ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ವ 2ನೇ ಕ್ಲಾಸ್ ಮಾಜಿಸ್ಟ್ರೇಟ್ ಮೆ॥ ಡಿ. ದೇವರಾಜೇ ಅರಸಿನವರಿಗೆ, 1882ನೇ ಇಸವಿ Xನೇ ಆಕ್ಟ್‌ಂಬ ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್ 191ನೇ ಸೆಕ್ಷನ್ b ಕ್ಲಾಜ್ ಅನುಸರಿಸಿ ಇದರಲ್ಲೀಕಂಡ ಜಾಸ್ತೀ ಅಧಿಕಾರ ಕೊಡಲ್ಪಟ್ಟಿರುತ್ತೆ:—

ಪೊಲೀಸ್ ರಿಪೋರ್ಟುಗಳ ಮೇಲೆ ತಕ್ಸೀರುಗಳ ವಿಚಾರಣೆ ಬಗ್ಗೆ ಅಧಿಕಾರ.

ಟಿ. ಆನಂದರಾವ್,
ಡಿಸ್ಟ್ರಿಕ್ಟು ಮಾಜಿಸ್ಟ್ರೇಟ್.

ನಗರ್ ಡಿವೀರ್ಜ್.

ನಗರ್ ಡಿವೀರ್ಜ್ ಡಿಸ್ಟ್ರಿಕ್ಟು ಜಡ್ಜ್‌ಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 48.

ಮೃತಪಟ್ಟ ಬುಡ್ಡಯ್ಯ ಉರಫ್ ಪರಶರಾಮಜೆ ಆಸ್ತಿ ವಿಷಯದಲ್ಲಿ—

ಅರ್ಜೀದಾರಳು ಭವಾನಿಬಾಯಿ ಮೃತಪಟ್ಟ ಸದರೀ ಪರಶರಾಮಜಿ ಯುಂಬವರಿಗೆ ಹೆಂಡತಿಯು ಆಗಬೇಕೆಂಬ ಹಕ್ಕುದಾರಿ ಮೇಲೆ ತರೀಕೆರೆ ತಾಲ್ಲೂಕು ಉಜೇವು ಸ್ಥಳದ ಭವಾನಿಬಾಯಿಯು ಸದರೀ ಉಜೇನ್ನು ವಾಸಸ್ಥರಾಗಿ ಮೃತಪಟ್ಟ ಪರಶರಾಮಜಿಯು ಜೀವದಲ್ಲಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.